# ಅಮ್ಮನ ಸೀರೆ

ಸುಧಾ ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಪ್ರಬಂಧ

■ ಗೋಪಾಲ ನಾಯ್ಕ

ರೈಲಿನಲ್ಲಿ ಕಿಟಕಿಯ ಕಡೆ ಮುಖ ಮಾಡಿ ಹೊರಗಿನ ಪ್ರಪಂಚವನ್ನು ನೋಡುತ್ತಿದ್ದ ಮಗಳು ಒಮ್ಮೆಲೇ 'ಪಪ್ಪಾ ಅಲ್ನೋಡಿ ಯೆಲ್ಲೋ ಕಲರ್ ಹೂಗಳು ಎಷ್ಟೊಂದಿವೆ' ಎಂದು ನನ್ನ ಗಮನ ಸೆಳೆದಳು. 'ಅದು ಸೂರ್ಯಕಾಂತಿ ಕಣಮ್ಮಾ, ಇಂಗ್ಲಿಷಲ್ಲಿ ಸನ್ ಫ್ಲವರ್ ಅಂತಾರೆ' ಅಂದೆ. 'ಪಪ್ಪಾ ನಾನದನ್ನ ಹತ್ತಿರದಿಂದ ಮುಟ್ಟಿ ನೋಡ್ಬೇಕು' ಎಂದು ಹಠ ಮಾಡಿದಳು. 'ನಾಳೆ ಬೆಳಿಗ್ಗೆ ನೀನು ಬೇಗ ಎದ್ರೆ ನಮ್ಮ ಹೊಲಕ್ಕೇ ಕರ್ಕೊಂಡ್ ಹೋಗ್ತೀನಿ ಆಯ್ತಾ' ಎಂದು ಸಮಾಧಾನ ಮಾಡಿದೆ.

ಹೇಳಿದಂತೆಯೇ ಮಾರನೇ ದಿನ ಬೆಳಿಗ್ಗೆ ಮಗಳು ನನಗಿಂತ ಮುಂಚೆಯೇ ಎದ್ದು 'ಪಪ್ಪಾ ಹೊಲಕ್ಕೆ ಹೋಗೋಣ್ವಾ' ಎಂದಳು. ನಾನು 'ಸರಿ ಅಮ್ಮನನ್ನೂ ಕರೆದುಕೊಂಡು ಹೋಗೋಣ' ಎಂದು ಹೇಳಿ ಕಾಫಿಯೂ ಕುಡಿಯದೆ, ಹೊಲಕ್ಕೆ ಹೋಗಿ ಬರೋಣ ಬಾ ಎಂದು ಹೆಂಡತಿಯನ್ನು ಕರೆದೆ. ಮುಂಜಾನೆಯ ಚುಮು ಚುಮು ಚಳಿ ಮತ್ತು ಪ್ರಯಾಣದ ಆಯಾಸ ಇನ್ನೂ ಕಳೆಯದಿದ್ದುದರಿಂದ ಅವಳು ಬರಲು ಒಪ್ಪಿಗೆ ಸೂಚಿಸದಿದ್ದರೂ ಅತ್ತೆ ಮಾವರ ಮನೆಯಲ್ಲಿ ನನ್ನಿಂದ ಹೆಚ್ಚು ಒತ್ತಾಯ ಮಾಡಿಸಿಕೊಳ್ಳುವುದು ಸರಿಯಲ್ಲವೆಂದು ಅವಳೇ ತಿಳಿದು ಬೇಸರದಿಂದಲೇ ರೆಡಿಯಾಗಿ, ಮಗಳಿಗೂ ಸ್ವೆಟರ್ ಟೋಪಿ ಹಾಕಿ, ತಲೆಯ ಮೇಲೊಂದು ಟವೆಲ್‌ನ್ನು ಹಾಕಿಕೊಂಡು ಗೊಣಗುತ್ತಾ ಹಿಂಬಾಲಿಸಿದಳು.

ನಮ್ಮ ಹೊಲಕ್ಕೆ ಹೋಗಬೇಕೆಂದರೆ ನಮ್ಮೂರ ಕೆರೆಯ ಏರಿಯನ್ನು ಹತ್ತಿ ಇಳಿದು ನಾಲ್ಕೈದು ಹೊಲಗಳನ್ನು ದಾಟಬೇಕು. ಹೀಗೆ ಹೆಂಡತಿಯ ಕೈ ಹಿಡಿದುಕೊಂಡು ಕೆರೆಯ ಏರಿ ಹತ್ತುವಾಗ, ಸೂರ್ಯ ಕೂಡ ನಮ್ಮ ಜೊತೆ ಸವಾಲಿಗೆ ಬಂದಂತೆ ಚೆನ್ನದ ಹೊದಿಕೆಯನ್ನು ಸರಿಸಿ ನಿಧಾನವಾಗಿ ಮೇಲೇರುತ್ತಿದ್ದ. ಪೂರ್ವದಲ್ಲಿ ಸೂರ್ಯ, ಪಶ್ಚಿಮದಲ್ಲಿ ಸೂರ್ಯಕಾಂತಿ ಹೂಗಳ ಮಹಾಸಾಗರ ಕಂಡು ಮಗಳು ವಾ....ವ್! ಎಂದಳು. ಆಗ ತಾನೆ ಪಕ್ಷಿಗಳು ಚಿಲಿಪಿಲಿ ಹಾಡುತ್ತಾ ಬಂಧುಗಳೊಡನೆ ಅಂದಿನ ತುತ್ತಿನ ಹುಡುಕಾಟಕ್ಕಾಗಿ ಪ್ರಯಾಣ ಬೆಳೆಸಿದ್ದವು. ನಮ್ಮ ಹೊಲಕ್ಕೆ ಹೋಗುವುದಕ್ಕೆ ಸರಿಯಾದ ದಾರಿ ಇಲ್ಲ. ಬೇರೆಯವರ ಹೊಲದ ಕಾಲು ದಾರಿಯಲ್ಲಿ ಸಾಗಬೇಕು. ಹೀಗೆ ಹೋಗುತ್ತಿದ್ದಾಗ ನಮ್ಮ ದಾರಿಗೆ ಅಡ್ಡವಾಗಿ ಬಾಗಿದ್ದ ಸೂರ್ಯಕಾಂತಿಯ ತೆನೆಗಳನ್ನು ಸರಿಸುತ್ತಾ ನಮ್ಮ ಹೊಲ ತಲುಪುವಷ್ಟರಲ್ಲಿ ನಾವಿಬ್ಬರೂ ಸೊಂಟದಿಂದ ಕೆಳಗೆ ಇಬ್ಬನಿಯ ನೀರಲ್ಲಿ ಸಂಪೂರ್ಣ ನೆಂದುಹೋಗಿದ್ದೆವು. ಮಗಳನ್ನು ನಾನು ಹೆಗಲ ಮೇಲೆ ಕೂರಿಸಿಕೊಂಡಿದ್ದರಿಂದ ನೆನೆದಿರಲಿಲ್ಲ ಆದರೂ ಅವಳಲ್ಲಿ ನೆನೆಯಬೇಕೆಂಬ ಆಸೆ ಇದ್ದದ್ದು ಗಮನಿಸಿದೆ.

ಅಷ್ಟರಲ್ಲಾಗಲೇ ನಮ್ಮ ಹೊಲದಲ್ಲಿ ಕೆಲವು ಪಕ್ಷಿಗಳು ತೆನೆಯ ಮೇಲೆ ಕೂತು ಇನ್ನೂ ಬಲಿಯದ ಕಾಳುಗಳ ರಸವನ್ನು ಹೀರುತ್ತಿದ್ದರೆ, ಇನ್ನೂ ಕೆಲವು ಬಲಿತ ಸೂರ್ಯಕಾಂತಿ ಬೀಜಗಳನ್ನು ಸುಲಿದು ತಿನ್ನುತ್ತಿದ್ದುದನ್ನು

